ಹುಲಸೂರಿನಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಬಸ್ ಸಂಚಾರ ಪ್ರಾರಂಭಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 51(313)

ಸದಸ್ಯರ ಹೆಸರು ಶ್ರೀ ರಾಜೇಂದ್ರ ವರ್ಮ(ಹುಲ್‌ಸೂರು)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಪ್ರಶ್ನೆ

1) ಹುಲಸೂರಿನಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಬಸ್ ಸಂಚಾರವನ್ನು ಪ್ರಾರಂಭಿಸಲಾಗಿದೆಯೇ?

ಇಲ್ಲದಿದ್ದಲ್ಲಿ ಈ ವಿಚಾರ ಸರಕಾರದ ಪರಿಶೀಲನೆಯಲ್ಲಿರುವುದು ನಿಜವೇ?

2) ಈ ಭಾಗದ ಜನರ ಅನುಕೂಲಕ್ಕಾಗಿ ಹುಲಸೂರು-ಬಸವಕಲ್ಯಾಣ ಹೈದ್ರಾಬಾದ್ ಮಾರ್ಗವಾಗಿ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಬಸ್ಸು ಸೇವೆಯನ್ನು ಆದಷ್ಟು ಶೀಘ್ರವಾಗಿ ಪ್ರಾರಂಭಿಸಲಾಗುವುದೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಉತ್ತರ

1) ಇಲ್ಲ

ಹೌದು, ಈ ವಿಷಯ ಪರಿಶೀಲನೆಯಲ್ಲಿದೆ

2) ಈ ವಿಷಯ ಪರಿಶೀಲನೆಯಲ್ಲಿದೆ

ಕೊಡಗು ಜಿಲ್ಲೆಯಲ್ಲಿ ನಡೆದ ಕೋಮು ಗಲಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 65(493)

ಸದಸ್ಯರ ಹೆಸರು ಶ್ರೀ ಅಪ್ಪಚ್ಚು ರಂಜನ್ ಎಂ ಪಿ (ಸೋಮವಾರಪೇಟೆ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಕೋಮು ಗಲಭೆ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಜಿಲ್ಲೆಯ ಪಾಲೂರು ದೇವಾಲಯ, ಧ್ವಂಸಕ್ಕೆ ಕಾರಣಕರ್ತರಾದ ದುಷ್ಕರ್ಮಿಗಳನ್ನು ಪತ್ತೆ ಹಚ್ಚಲಾಗಿದೆಯೇ? ಪತ್ತೆ ಹಚ್ಚಿದ್ದರೆ ದುಷ್ಕರ್ಮಿಗಳ ವಿವರ ನೀಡುವುದು, ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ?

ಇ) ಕೋಮು ಗಲಭೆಯಲ್ಲಿ ಎಷ್ಟು ಮೊತ್ತದ ಸಾರ್ವಜನಿಕ ಆಸ್ತಿ ಹಾನಿಯಾಗಿದೆ? ಎಷ್ಟು ಮೊತ್ತದ ಪರಿಹಾರ ಮಂಜೂರು ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಈ) ಕೋಮು ಗಲಭೆಯಲ್ಲಿ ಅಮಾಯಕರ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯದ ಬಗ್ಗೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ?

ಉತ್ತರ

ಅ) ಹೌದು

ಆ) ದುಷ್ಕರ್ಮಿಗಳನ್ನು ಪತ್ತೆ ಹಚ್ಚಲಾಗಿದೆ ಪಾಲೂರು ನಿವಾಸಿಗಳಾದ 7 ಜನರ ವಿರುದ್ಧ ದಿನಾಂಕ 09-12-2001ರಂದು ದೂರನ್ನು ಸ್ವೀಕರಿಸಲಾಗಿದೆ ನಾಪೋಕ್ಲು ರಾಣೆಯಲ್ಲಿ ಸಂಖ್ಯೆ 129 2001ರಲ್ಲಿ ಕಲಂ 454, 457, 380 427, 153(ಎ) ಜೊತೆಗೆ 149 ಐ ಪಿ ಸಿ ಯಂತೆ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ ಅದರಲ್ಲಿ 4 ಜನರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ ಮೊಕದ್ದಮೆ ತನಿಖೆಯಲ್ಲಿರುತ್ತದೆ

ಇ) ವಿವರಗಳನ್ನು ಲಗತ್ತಿಸಿದೆ

ಈ) ಕೋಮು ಗಲಭೆಯ ವೇಳೆಯಲ್ಲಿ ಪೊಲೀಸರು ಯಾವುದೇ ಅಮಾಯಕರ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆಸಿರುವುದಿಲ್ಲ ಆದುದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

ಕೊಡಗು ಜಿಲ್ಲೆಯ ಕೋಮು ಗಲಭೆಗೆ ಸಂಬಂಧಿಸಿದಂತೆ ಪರಿಹಾರ ನೀಡಿರುವ ತಾಲ್ಲೂಕುವಾರು ವಿವರಗಳು

ತಾಲ್ಲೂಕಿನ ಹೆಸರು	ನಷ್ಟದ ಮೊತ್ತ	ಪರಿಹಾರ ನೀಡಿದ ಮೊತ್ತ
ಮಡಿಕೇರಿ	37,96,210-00	7,29,410-00
ವಿರಾಜಪೇಟೆ	25,62,730-00	17,70 102-00
ಸೋಮವಾರಪೇಟೆ	3,66,800-00	1,61,050-00
ಒಟ್ಟು	67,25,740-00	26,60,562-00